# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 335
ಸದಸ್ಯರ ಹೆಸರು : ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ : 14/09/2021
ಉತ್ತರಿಸುವ ಸಚಿವರು : ಮಾನ್ಯ ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ ಸಾರ್ವಜನಿಕ ಉದ್ಯಮಗಳ ಸಚಿವರು.

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಹೊಸದಾಗಿ ಪಟ್ಟಣ ಪಂಚಾಯಿತಿ, ಪುರಸಭೆ ಮತ್ತು ನಗರಸಭೆಗಳಾಗಿ ನಗರಗಳನ್ನು ಉನ್ನತೀಕರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ, ಹೊಸದಾಗಿ ಉನ್ನತೀಕರಿಸುತ್ತಿರುವ ನಗರಗಳು ಯಾವುವು (ಜಿಲ್ಲಾವಾರು ವಿವರ ನೀಡುವುದು); | ಪ್ರಸ್ತುತ, ಸರ್ಕಾರದಲ್ಲಿ ಕೊಡಗು ಜಿಲ್ಲೆಯ ವಿರಾಜಪೇಟೆ ಪಟ್ಟಣ ಪಂಚಾಯತಿಯನ್ನು ಪುರಸಭೆಯನ್ನಾಗಿ ಉನ್ನತೀಕರಿಸುವ ಪ್ರಸ್ತಾವನೆಯು ಇದ್ದು, ಸದರಿ ಪ್ರಸ್ತಾವನೆಯನ್ನು ಕರ್ನಾಟಕ ಪುರಸಭೆಗಳ ಕಾಯ್ದೆ 1964 ರ ಕಲಂ-3, 9, 335, 335(ಬಿ) & 349 ರನ್ವಯ ಪರಿಶೀಲಿಸಲಾಗುತ್ತಿದೆ. |
| (ಆ) | ಈ ಹಿಂದೆ ಉನ್ನತೀಕರಿಸಲ್ಪಟ್ಟ ಪಟ್ಟಣ ಪಂಚಾಯಿತಿ, ಪುರಸಭೆ ಮತ್ತು ನಗರಸಭೆಗಳು ಮೂಲಭೂತ ಸೌಲಭ್ಯಗಳಿಂದ ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಈ ಸ್ಥಳೀಯ ಸಂಸ್ಥೆಗಳನ್ನು ಅಭಿವೃದ್ಧಿಪಡಿಸಲು ಯಾವ ಯೋಜನೆಗಳನ್ನು ಸಿದ್ಧಪಡಿಸಲಾಗಿದೆ (ವಿವರ ನೀಡುವುದು); | ಈ ಹಿಂದೆ ಉನ್ನತೀಕರಿಸಲ್ಪಟ್ಟ ಪಟ್ಟಣ ಪಂಚಾಯಿತಿ, ಪುರಸಭೆ ಮತ್ತು ನಗರಸಭೆಗಳಿಗೆ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲು ಯೋಜನೆವಾರು ವಿವರ ಈ ಕೆಳಕಂಡಂತಿದೆ.<br>**ಎಸ್.ಎಫ್.ಸಿ ಮುಕ್ತನಿಧಿ ಅನುದಾನ:-**<br>ಎಸ್.ಎಫ್.ಸಿ ಮುಕ್ತನಿಧಿ ಅನುದಾನದಡಿಯಲ್ಲಿ ಮೂಲಭೂತ ಸೌಕರ್ಯ ಕಲ್ಪಿಸಲು (1) ಕುಡಿಯುವ ನೀರು (2) ತರಕಾರಿ ಮಾರುಕಟ್ಟೆ (3) ಮಾಂಸ, ಕೋಳಿ ಹಾಗೂ ಮೀನು ಮಾರುಕಟ್ಟೆ (4) ಸಣ್ಣ ಪ್ರಮಾಣದ ಮಾರುಕಟ್ಟೆ ನಿರ್ಮಾಣ (5) ಸಾರ್ವಜನಿಕ ಶೌಚಾಲಯಗಳ ನಿರ್ಮಾಣ ಮಾಡುವುದು (6) ಸ್ಮಶಾನ ಅಭಿವೃದ್ಧಿ (7) ಆಂತರಿಕ ರಸ್ತೆಗಳ ಮತ್ತು ಚರಂಡಿಗಳ ನಿರ್ಮಾಣ ಮಾಡಲು ಅವಕಾಶ ಕಲ್ಪಿಸಲಾಗಿದೆ.<br><br>**ಎಸ್.ಎಫ್.ಸಿ ಕುಡಿಯುವ ನೀರು ಅನುದಾನ :-**<br>ಎಸ್.ಎಫ್.ಸಿ ಕುಡಿಯವ ನೀರು ಅನುದಾನದಡಿ (1) ಕೊಳವೆ ಬಾವಿಗಳನ್ನು ಆಳಗೊಳಿಸುವುದು/ ಸ್ವಚ್ಛಗೊಳಿಸುವುದು (2) ಹೈಡ್ರೋಫ್ಯಾಕ್ಚರಿಂಗ್ (3) ನೀರು ಸರಬರಾಜು ಪೈಪುಗಳ ದುರಸ್ತಿ/ ಬದಲಾವಣೆ (4) ಹೊಸ ಕೊಳವೆ ಬಾವಿಗಳನ್ನು ಕೊರೆಯಲು ಹಾಗೂ ಪಂಪು ಮೋಟಾರ್ ಅಳವಡಿಸುವ ಕಾಮಗಾರಿ (5) ಕುಡಿಯುವ ನೀರು ಸರಬರಾಜು ಕಾಮಗಾರಿಗಳಿಗೆ ಅವಶ್ಯವಿರುವ ಪಂಪು ಮೋಟಾರ್, ಪೈಪ್ ಲೈನ್ ಮತ್ತು ಇತರೆ ಸಲಕರಣೆಗಳ ಸಂಗ್ರಹಣೆ ಮೊದಲಾದ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿರುತ್ತದೆ. |

| | | |
|---|---|---|
| | | **ಎಸ್.ಎಫ್.ಸಿ ವಿಶೇಷ ಅನುದಾನ:-**<br>ಮಾನ್ಯ ಮುಖ್ಯಮಂತ್ರಿಗಳ ವಿವೇಚನಾನುಸಾರ ನಗರ ಸ್ಥಳೀಯ ಸಂಸ್ಥೆಗಳಿಗೆ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಎಸ್.ಎಫ್.ಸಿ ವಿಶೇಷ ಅನುದಾನವನ್ನು ಮಂಜೂರು ಮಾಡಿ ಬಿಡುಗಡೆಗೊಳಿಸುತ್ತಿರುತ್ತದೆ.<br>**14ನೇ ಮತ್ತು 15ನೇ ಹಣಕಾಸು ಯೋಜನೆಯ :**<br>14ನೇ ಮತ್ತು 15ನೇ ಹಣಕಾಸು ಯೋಜನೆಯ ಅನುದಾನ ಹಂಚಿಕೆ ಮಾಡಿ ಬಿಡುಗಡೆಗೊಳಿಸಲಾಗಿದೆ ಹಾಗೂ ಸದರಿ ಅನುದಾನದಲ್ಲಿ ನಗರ ಸ್ಥಳೀಯ ಸಂಸ್ಥೆಗಳು ಯೋಜನೆಯ ಮಾರ್ಗಸೂಚಿಯನ್ವಯ ಮೂಲಭೂತ ಸೌಕರ್ಯಗಳ ಕಾಮಗಾರಿಗಳನ್ನು ಕೈಗೊಂಡು ಅನುಷ್ಠಾನಗೊಳಿಸುತ್ತಿವೆ. |
| (ಇ) | ಮಂಡ್ಯ ಜಿಲ್ಲೆ ವ್ಯಾಪ್ತಿಯಲ್ಲಿ ಪ್ರಸ್ತುತ ಉನ್ನತೀಕರಿಸುತ್ತಿರುವ ಸ್ಥಳೀಯ ಸಂಸ್ಥೆಗಳಾವುವು ತಾಲೂಕುವಾರು ವಿವರ ನೀಡುವುದು); | ಇರುವುದಿಲ್ಲ. |
| (ಈ) | ನಾಗಮಂಗಲ ತಾಲೂಕಿನಲ್ಲಿ ಉನ್ನತೀಕರಿಸಲ್ಪಟ್ಟ ನಾಗಮಂಗಲ ಪುರಸಭೆ ಮತ್ತು ಬೆಳ್ಳೂರು ಪಟ್ಟಣ ಪಂಚಾಯಿತಿಗಳಲ್ಲಿ ಅಗತ್ಯ ಮೂಲಭೂತ ಸೌಲಭ್ಯಗಳ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ನಾಗಮಂಗಲ ತಾಲೂಕಿನಲ್ಲಿ ಉನ್ನತೀಕರಿಸಲ್ಪಟ್ಟ ನಾಗಮಂಗಲ ಪುರಸಭೆ ಮತ್ತು ಬೆಳ್ಳೂರು ಪಟ್ಟಣ ಪಂಚಾಯತಿಗಳಲ್ಲಿ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಹಂತ ಹಂತವಾಗಿ ಅನುಷ್ಠಾನಗೊಳಿಸಲಾಗುವುದು. |
| (ಉ) | ಹಾಗಿದ್ದಲ್ಲಿ, ನಾಗಮಂಗಲ ಪುರಸಭೆ ಮತ್ತು ಬೆಳ್ಳೂರು ಪಟ್ಟಣ ಪಂಚಾಯಿತಿಗಳನ್ನು ಅಭಿವೃದ್ಧಿಪಡಿಸಲು ಯಾವ ಯಾವ ಯೋಜನೆ ಅನುಷ್ಠಾನಗೊಳಿಸಲಾಗಿದೆ; ಯೋಜನೆ ಯಾವ ಹಂತದಲ್ಲಿದೆ (ವಿವರ ನೀಡುವುದು); | ನಾಗಮಂಗಲ ಪುರಸಭೆ ಮತ್ತು ಬೆಳ್ಳೂರು ಪಟ್ಟಣ ಪಂಚಾಯತಿಗಳನ್ನು ಅಭಿವೃದ್ಧಿಪಡಿಸಲು ಅನುಷ್ಠಾನಗೊಳಿಸಲಾಗಿರುವ ಯೋಜನೆವಾರು ವಿವರ ಈ ಕೆಳಕಂಡಂತಿದೆ.<br><br>ನಗರೋತ್ಥಾನ:<br><br>ನಾಗಮಂಗಲ ಪುರಸಭೆ: ನಗರೋತ್ಥಾನ (ಮುನಿಸಿಪಾಲಿಟಿ) - 3ನೇ ಹಂತದ ಯೋಜನೆಯಡಿಯಲ್ಲಿ ರಸ್ತೆ, ಚರಂಡಿ ಅಭಿವೃದ್ಧಿ ಹಾಗೂ ಕುಡಿಯುವ ನೀರಿನ ಒಟ್ಟು 14 ಕಾಮಗಾರಿಗಳು ಅನುಮೋದನೆಗೊಂಡಿದ್ದು, ಈಗಾಗಲೇ ಕೆ.ಯು.ಡಬ್ಲ್ಯುಎಸ್. & ಡಿ.ಬಿ., ಮಂಡ್ಯರವರಿಂದ ರೂ.104.02 ಲಕ್ಷಗಳ 02 ಕಾಮಗಾರಿಗಳು ಮತ್ತು ರಸ್ತೆ ಮತ್ತು ಚರಂಡಿ ಕಾಮಗಾರಿಗಳ ರೂ.65.98 ಲಕ್ಷಗಳ 03 ಕಾಮಗಾರಿಗಳು ಪೂರ್ಣಗೊಂಡು ವೆಚ್ಚವಾಗಿರುತ್ತದೆ ಹಾಗೂ ಒಳಚರಂಡಿ ವ್ಯವಸ್ಥೆಗಾಗಿ ರೂ.107.15 ಲಕ್ಷಗಳನ್ನು ಕೆ.ಯು.ಡಬ್ಲ್ಯು.ಎಸ್. ಅಂಡ್ ಡಿ.ಬಿ.ಗೆ ವಂತಿಕೆಯಾಗಿ ನೀಡಲಾಗಿದೆ. ಕುಡಿಯುವ ನೀರು, ರಸ್ತೆ ಮತ್ತು ಚರಂಡಿ ಕಾಮಗಾರಿಗಳ ರೂ.360.35 ಲಕ್ಷಗಳ 08 ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.<br>ಬೆಳ್ಳೂರು ಪಟ್ಟಣ ಪಂಚಾಯಿತಿ:<br>ನಗರೋತ್ಥಾನ(ಮುನಿಸಿಪಾಲಿಟಿ) – 3 ನೇ ಹಂತದ ಯೋಜನೆಯಡಿ ರೂ.200.00 ಲಕ್ಷಗಳನ್ನು ಕೆ..ಯು.ಡಬ್ಲ್ಯು.ಎಸ್. & ಡಿ.ಬಿ., ಮಂಡ್ಯರವರಿಗೆ ಕುಡಿಯುವ ನೀರಿನ ಕಾಮಗಾರಿ ಅನುಷ್ಠಾನಗೊಳಿಸಲು ಠೇವಣಿ ನೀಡಲಾಗಿದೆ ಹಾಗೂ |

| | | |
|---|---|---|
| | | ರೂ.225.00 ಲಕ್ಷಗಳ 05 ರಸ್ತೆ ಮತ್ತು ಚರಂಡಿ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.<br><br>**ಸ್ವಚ್‌ಭಾರತ್ ಮಿಷನ್ :**<br>ನಾಗಮಂಗಲ ಪುರಸಭೆ ಮತ್ತು ಬೆಳ್ಳೂರು ಪಟ್ಟಣ ಪಂಚಾಯತಿಗಳನ್ನು ಅಭಿವೃದ್ಧಿಪಡಿಸಲು ಸ್ವಚ್ಛ ಭಾರತ ಯೋಜನೆಯಡಿ ವೈಯಕ್ತಿಕ ಶೌಚಾಲಯಗಳ ನಿರ್ಮಾಣ, ಐ.ಇ.ಸಿ ಮತ್ತು ಘನತ್ಯಾಜ್ಯ ವಸ್ತು ನಿರ್ವಹಣೆಯ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ.ಯೋಜನೆಯ ಅನುಷ್ಠಾನದ ವಿವರಗಳನ್ನು ಅನುಬಂಧ-1 ರಲ್ಲಿ ಲಗತ್ತಿಸಿದೆ.<br><br>ಎಸ್.ಎಫ್.ಸಿ ಮುಕ್ತನಿಧಿ ಹಾಗೂ ಎಸ್.ಎಫ್.ಸಿ ಕುಡಿಯುವ ನೀರು :<br>ನಾಗಮಂಗಲ ಪುರಸಭೆ ಹಾಗೂ ಬೆಳ್ಳೂರು ಪಟ್ಟಣ ಪಂಚಾಯಿತಿಗಳಿಗೆ ಎಸ್.ಎಫ್.ಸಿ ಮುಕ್ತನಿಧಿ ಹಾಗೂ ಎಸ್.ಎಫ್.ಸಿ ಕುಡಿಯುವ ನೀರು ಅನುದಾನದ ವಿವರಗಳನ್ನು ಅನುಬಂಧ-02 ರಲ್ಲಿ ಲಗತ್ತಿಸಿದೆ.<br><br>14ನೇ ಹಣಕಾಸು ಆಯೋಗದ ಅನುದಾನ:<br><br>ನಾಗಮಂಗಲ ಪುರಸಭೆ: 2019-20 ನೇ ಸಾಲಿನ 14ನೇ ಹಣಕಾಸು ಯೋಜನೆಯ 06 ಕಾಮಗಾರಿಗಳನ್ನು ರೂ.78.82 ಲಕ್ಷಗಳಲ್ಲಿ ಅನುಷ್ಠಾನಗೊಳಿಸಲಾಗಿರುತ್ತದೆ. 01 ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.<br>ಬೆಳ್ಳೂರು ಪಟ್ಟಣ ಪಂಚಾಯಿತಿ: 2019-20 ನೇ ಸಾಲಿನ 14 ನೇ ಹಣಕಾಸು ಯೋಜನೆಯ 03 ಕಾಮಗಾರಿಗಳನ್ನು ರೂ.49.89 ಲಕ್ಷಗಳಲ್ಲಿ ಅನುಷ್ಠಾನಗೊಳಿಸಲಾಗಿರುತ್ತದೆ. 03 ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. 01 ಕಾಮಗಾರಿಯನ್ನು ಟೆಂಡರ್ ಕರೆಯಬೇಕಾಗಿರುತ್ತದೆ.<br><br>15 ನೇ ಹಣಕಾಸು ಆಯೋಗದ ಅನುದಾನ:<br><br>ನಾಗಮಂಗಲ ಪುರಸಭೆ: 2020-21 ನೇ ಸಾಲಿನ 15ನೇ ಹಣಕಾಸು ಯೋಜನೆಯ 10 ಕಾಮಗಾರಿಗಳಲ್ಲಿ 01 ಕಾಮಗಾರಿಯನ್ನು ಅನುಷ್ಠಾನಗೊಳಿಸಲಾಗಿರುತ್ತದೆ. ರೂ.55.00 ಲಕ್ಷಗಳ 06 ಕಾಮಗಾರಿಗಳು ಪ್ರಗತಿಯಲ್ಲಿದ್ದು, ರೂ.28.54 ಲಕ್ಷಗಳ 03 ಕಾಮಗಾರಿಗಳಿಗೆ ಟೆಂಡರ್ ಕರೆಯಬೇಕಾಗಿರುತ್ತದೆ. 2021-22 ನೇ ಸಾಲಿನ ಕ್ರಿಯಾಯೋಜನೆಗೆ ಅನುಮೋದನೆ ನೀಡಬೇಕಾಗಿರುತ್ತದೆ.<br>ಬೆಳ್ಳೂರು ಪಟ್ಟಣ ಪಂಚಾಯಿತಿ:2020-21ನೇ ಸಾಲಿನ 15 ನೇ ಹಣಕಾಸು ಯೋಜನೆಯ 09 ಕಾಮಗಾರಿಗಳಲ್ಲಿ 01 ಕಾಮಗಾರಿಯನ್ನು ಅನುಷ್ಠಾನಗೊಳಿಸಲಾಗಿರುತ್ತದೆ. ರೂ.39.00 ಲಕ್ಷಗಳ 03 ಕಾಮಗಾರಿಗಳು ಪ್ರಗತಿಯಲ್ಲಿದ್ದು, ರೂ.34.95 ಲಕ್ಷಗಳ 03 ಕಾಮಗಾರಿಗಳು ಟೆಂಡರ್ ಪ್ರಕ್ರಿಯೆಯಲ್ಲಿರುತ್ತವೆ. ರೂ.42.00 ಲಕ್ಷಗಳ 02 ಕಾಮಗಾರಿಗಳಿಗೆ ಟೆಂಡರ್ ಕರೆಯಬೇಕಾಗಿರುತ್ತದೆ.<br>2021-22 ನೇ ಸಾಲಿನ ಕ್ರಿಯಾಯೋಜನೆಗೆ ಅನುಮೋದನೆ ನೀಡಬೇಕಾಗಿರುತ್ತದೆ. |

| | | |
|---|---|---|
| (ಊ) | ಹಾಗಿದ್ದಲ್ಲಿ, ಯಾವ ಕಾಲಮಿತಿಯೊಳಗೆ ಯೋಜನೆ ಸಿದ್ಧಪಡಿಸಿ ಅನುಷ್ಠಣ ಮಾಡಲಾಗುವುದು; ಈ ಬಗ್ಗೆ ಸರ್ಕಾರದ ನಿಲುವೇನು (ವಿವರ ನೀಡುವುದು)? | ಯೋಜನಾವಾರು ಸಿದ್ಧಪಡಿಸಿ ಅನುಷ್ಠಾನ ಮಾಡಲಾಗುವ ವಿವರ ಈ ಕೆಳಕಂಡಂತಿದೆ.<br>**ನಗರೋತ್ಥಾನ :**<br>ನಗರೋತ್ಥಾನ(ಮುನಿಸಿಪಾಲಿಟಿ)- 3ನೇ ಹಂತದ ಯೋಜನೆಯಡಿ ಪ್ರಗತಿಯಲ್ಲಿರುವ ಕಾಮಗಾರಿಗಳನ್ನು ಡಿಸೆಂಬರ್-2021 ರ ಮಾಹೆಯ ಅಂತ್ಯದೊಳಗೆ ಪೂರ್ಣಗೊಳಿಸಲು ಕ್ರಮವಹಿಸಲಾಗುತ್ತದೆ ಎಂದು ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಮಂಡ್ಯ ಜಿಲ್ಲೆರವರು ವರದಿ ಮಾಡಿರುವಂತೆ ಸಲ್ಲಿಸಿದೆ.<br>**ಸ್ವಚ್‌ಭಾರತ್ ಮಿಷನ್ :**<br>ಸ್ವಚ್ಛ ಭಾರತ ಯೋಜನೆಯ ಮಾರ್ಗಸೂಚಿಗಳ್ವಯ ಎಲ್ಲಾ ಘಟಕಗಳ 100% ರಷ್ಟು ಪ್ರಗತಿಯನ್ನು ಮಾರ್ಚ್-2022 ರೊಳಗೆ ಪೂರ್ಣಗೊಳಿಸಬೇಕಿದ್ದು, ನಾಗಮಂಗಲ ಪುರಸಭೆ ಮತ್ತು ಬೆಳ್ಳೂರು ಪಟ್ಟಣ ಪಂಚಾಯಿತಿಗೆ ಎಸ್.ಬಿ.ಎಂ ಮಾರ್ಗಸೂಚಿಗಳ್ವಯ ಪೂರಕ ಅನುದಾನಗಳನ್ನು ಬಿಡುಗಡೆ ಮಾಡಲಾಗಿರುತ್ತದೆ ಮತ್ತು ಕಾಲ ಕಾಲಕ್ಕೆ ಪ್ರಗತಿ ಪರಿಶೀಲನಾ ಸಭೆಗಳನ್ನು ಆಯೋಜಿಸಿ ಪ್ರಗತಿಯ ವಿವರಗಳನ್ನು ಪಡೆಯಲಾಗಿರುತ್ತದೆ. (ಪ್ರಗತಿಯ ವಿವರಗಳನ್ನು ಅನುಬಂಧ:1A ರಲ್ಲಿ ಲಗತ್ತಿಸಿದೆ.)<br>**ಎಸ್.ಎಫ್.ಸಿ ಮುಕ್ತನಿಧಿ ಹಾಗೂ ಎಸ್.ಎಫ್.ಸಿ ಕುಡಿಯುವ ನೀರು:**<br>ಎಸ್.ಎಫ್.ಸಿ ಮುಕ್ತನಿಧಿ ಹಾಗೂ ಎಸ್.ಎಫ್.ಸಿ ಕುಡಿಯುವ ನೀರು ಮಾರ್ಗಸೂಚಿಗಳನ್ವಯ ನಿಗಧಿತ ಕಾಲಮಿತಿಯೊಳಗೆ ಅನುಷ್ಠಾನಗೊಳಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ.<br><br>**14ನೇ ಮತ್ತು 15ನೇ ಹಣಕಾಸು ಆಯೋಗ :**<br>14ನೇ ಮತ್ತು 15ನೇ ಹಣಕಾಸು ಆಯೋಗದ ಅನುದಾನದ 2020-21 ನೇ ಸಾಲಿನವರೆಗಿನ ಅನುದಾನದ ಬಾಕಿ ಇರುವ ಕಾಮಗಾರಿಗಳನ್ನು ಡಿಸೆಂಬರ್-2021ರೊಳಗೆ ಮತ್ತು 2021-22 ನೇ ಸಾಲಿನ ಅನುದಾನದ ಕಾಮಗಾರಿಗಳನ್ನು ಮಾರ್ಚ್-2022 ಮಾಹೆ ಅಂತ್ಯದೊಳಗೆ 100% ರಷ್ಟು ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಪ್ರಯತ್ನಿಸಲಾಗುವುದು. |

ಸಂಖ್ಯೆ: ನಅಇ 29 ಎಲ್‌ಸಿಕ್ಯೂ 2021

(ಎನ್. ನಾಗರಾಜು ಎಂ ಟಿ ಬಿ)
ಮಾನ್ಯ ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ ಸಾರ್ವಜನಿಕ ಉದ್ಯಮಗಳ ಸಚಿವರು.

## ಅನುಬಂಧ-1

| ಕ್ರಮ ಸಂಖ್ಯೆ | ಘಟಕಗಳು | ಗುರಿ | ಸಾಧನೆ | ಅನುಷ್ಠಾನದ ವಿವರ |
|---|---|---|---|---|
| | | ನಾಗಮಂಗಲ ಪುರಸಭೆ | | |
| 1 | ವೈಯಕ್ತಿಕ ಶೌಚಾಲಯಗಳ ನಿರ್ಮಾಣ | 93 | 93 | 93 ವೈಯಕ್ತಿಕ ಶೌಚಾಲಯಗಳ ಗುರಿ ಹೊಂದಿದ್ದು 93 ಶೌಚಾಲಯಗಳನ್ನು ನಿರ್ಮಾಣ ಮಾಡಲಾಗಿರುತ್ತದೆ |
| 2 | ಘನತ್ಯಾಜ್ಯ ವಸ್ತು ನಿರ್ವಹಣೆ | 21 ಸಿವಿಲ್ ಕಾಮಗಾರಿ 5 ವಾಹನ ಯಂತ್ರೋಪಕರಣಗಳ ಖರೀದಿ ಕಾಮಗಾರಿ | 21 ಸಿವಿಲ್ ಕಾಮಗಾರಿಗಳು ಪೂರ್ಣಗೊಳ್ಳುವ ಹಂತದಲ್ಲಿರುತ್ತದೆ ಹಾಗೆಯೇ 4 ವಾಹನ ಯಂತ್ರೋಪಕರಣಗಳನ್ನು ಖರೀದಿ ಮಾಡಲಾಗಿದ್ದು. ಉಳಿಕೆ ಯಂತ್ರೋಪಕರಣವನ್ನು ಖರೀದಿಸಲು ಕಾರ್ಯಾದೇಶ ನೀಡಲಾಗಿರುತ್ತದೆ. | ಘನತ್ಯಾಜ್ಯ ವಸ್ತು ನಿರ್ವಹಣೆಗೆ ಸಂಬಂಧಿಸಿದಂತೆ ವಿಸ್ತೃತ ಯೋಜನಾ ವರದಿಯನ್ನು ಸಿದ್ಧಪಡಿಸಿ, ಟೆಂಡರ್ ಕರೆದು 21 ಸಿವಿಲ್ ಕಾಮಗಾರಿಗಳನ್ನು ಮತ್ತು 5 ವಾಹನ ಯಂತ್ರೋಪಕರಣಗಳ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದದ್ದು. 21 ಸಿವಿಲ್ ಕಾಮಗಾರಿಗಳು ಪೂರ್ಣಗೊಳ್ಳುವ ಹಂತದಲ್ಲಿವೆ ಮತ್ತು 4 ವಾಹನ ಖರೀದಿ ಮಾಡಲಾಗಿದ್ದು. 1 ವಾಹನ ಖರೀದಿ ಪ್ರಕ್ರಿಯೆ ಬಾಕಿಯಲ್ಲಿರುತ್ತದೆ. |
| 3 | ಐ.ಇ.ಸಿ | – | – | ರೂ 5.00 ಲಕ್ಷಗಳ ಅನುದಾನದಲ್ಲಿ ಸಾರ್ವಜನಿಕರಿಗೆ ಸ್ವಚ್ಛ ಭಾರತ ಯೋಜನೆಯ ಬಗ್ಗೆ ಅರಿವು ಮೂಡಿಸುವ ಸಲುವಾಗಿ ಪೌರಕಾರ್ಮಿಕರಿಗೆ ಕಾರ್ಯಾಗಾರಗಳು. ಬಣ್ಣದ ಗೋಡೆ ಬರಹ.ಪ್ಲಾಸ್ಟಿಕ್ ನಿಷೇಧ ಕುರಿತು ಅರಿವು ಮೂಡಿಸುವು ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. |
| | | ಬೇಲೂರು ಪಟ್ಟಣ ಪಂಚಾಯಿತಿ | | |
| | ಐ.ಇ.ಸಿ | – | – | ರೂ [illegible] ಲಕ್ಷಗಳ ಅನುದಾನದಲ್ಲಿ ಸಾರ್ವಜನಿಕರಿಗೆ ಸ್ವಚ್ಛ ಭಾರತ ಯೋಜನೆಯ ಬಗ್ಗೆ ಅರಿವು ಮೂಡಿಸುವ ಸಲುವಾಗಿ ಪೌರಕಾರ್ಮಿಕರಿಗೆ ಕಾರ್ಯಾಗಾರಗಳು. ಬಣ್ಣದ ಗೋಡೆ ಬರಹ.ಪ್ಲಾಸ್ಟಿಕ್ ನಿಷೇಧ ಕುರಿತು ಅರಿವು ಮೂಡಿಸುವು ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. |

## ಅನುಬಂಧ-~~2~~ A

| ಕ್ರಮ ಸಂಖ್ಯೆ | ಘಟಕಗಳು | ಗುರಿ | ಸಾಧನೆ | ಅನುಷ್ಠಾನದ ಕಾಲಮಿತಿ |
|---|---|---|---|---|
| | | ನಾಗಮಂಗಲ ಪುರಸಭೆ | | |
| 1 | ವೈಯಕ್ತಿಕ ಶೌಚಾಲಯಗಳ ನಿರ್ಮಾಣ | 93 | 93 | ಪೂರ್ಣಗೊಂಡಿದೆ. |
| 2. | ಘನತ್ಯಾಜ್ಯ ವಸ್ತು ನಿರ್ವಹಣೆ | 21 ಸಿವಿಲ್ ಕಾಮಗಾರಿ 5 ವಾಹನ ಯಂತ್ರೋಪಕರಣಗಳ ಖರೀದಿ ಕಾಮಗಾರಿ | 21 ಸಿವಿಲ್ ಕಾಮಗಾರಿಗಳು ಪೂರ್ಣಗೊಳ್ಳುವ ಹಂತದಲ್ಲಿರುತ್ತದೆ ಹಾಗೆಯೇ 4 ವಾಹನ ಯಂತ್ರೋಪಕರಣಗಳನ್ನು ಖರೀದಿ ಮಾಡಲಾಗಿದ್ದು. ಉಳಿಕೆ ಯಂತ್ರೋಪಕರಣವನ್ನು ಖರೀದಿಸಲು ಕಾರ್ಯಾದೇಶ ನೀಡಲಾಗಿರುತ್ತದೆ. | ಮಾರ್ಚ 2022 |
| 3 | ಐ.ಇ.ಸಿ | – | – | ನವೆಂಬರ್-2021 |
| | | ಬೇಲೂರು ಪಟ್ಟಣ ಪಂಚಾಯಿತಿ | | |
| | ಐ.ಇ.ಸಿ | – | – | ಡಿಸೆಂಬರ್-2021 |

Annexure-2

## PROGRESS OF WORKS UNDER SFC UNTIED

Date=08-09-2021 | Rs. in Lakhs

| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 | 18 | 19 | 20 |
|---|---|---|---|---|---|---|---|---|---|---|---|---|---|---|---|---|---|---|---|
| District | Name Of the Town | ULB Type | SubScheme Name | Grants Allocation | Total no. of works | Approved Action Plan | | Action Plan yet to be approved Amount | Works Started | | Under Tender Process | | Tender to be Invited | | Grants Released | Expenditure | No of Works Completed | % Utilization Against Allocation | % Utilization Against Release |
| | | | | | | No of works | Amount | | No of works | Amount | No of works | Amount | No of works | Amount | | | | | |
| Mandya | belluru | TP | 2019-20 | 74 | 33 | 32 | 79.63 | 0 | 4 | 4.05 | 0 | 0 | 2 | 2.03 | 74.5 | 70.29 | 27 | 94.99 | 94.35 |
| | | | 2020-21 | 27.81 | 16 | 17 | 10.49 | 0 | 2 | 0.87 | 0 | 0 | 4 | 1.79 | 27.81 | 7.55 | 10 | 27.15 | 27.15 |
| | | | 2021-22 | 37 | 0 | 0 | 0 | 0 | 0 | 0 | 0 | 0 | 0 | 0 | 18.5 | 0 | 0 | 0.00 | 0.00 |
| | Nagamangala | TMC | 2019-20 | 49 | 18 | 18 | 49 | 0 | 1 | 9.11 | 0 | 0 | 0 | 0 | 49 | 42.25 | 17 | 86.22 | 86.22 |
| | | | 2020-21 | 18.24 | 17 | 17 | 17.77 | 0 | 8 | 3.23 | 0 | 0 | 0 | 0 | 18.24 | 14.27 | 9 | 78.23 | 78.23 |
| | | | 2021-22 | 24 | 1 | 1 | 17 | 0 | 0 | 0 | 0 | 0 | 1 | 17 | 12 | 1.87 | 0 | 7.79 | 15.58 |
| | | | Total | 230.05 | 85 | 85 | 173.89 | 0 | 16 | 17.26 | 0 | 0 | 7 | 20.82 | 200.05 | 136.23 | 63 | 59.22 | 68.10 |

## PROGRESS OF WORKS UNDER SFC Drinking Water

Date=08-09-2021 | Rs. in Lakhs

| District | Name Of the Town | ULB Type | SubScheme Name | Grants Allocation | Total no. of works | Approved Action Plan | | Action Plan yet to be approved Amount | Works Started | | Under Tender Process | | Tender to be Invited | | Grants Released | Expenditure | No of Works Completed | % Utilization Against Allocation | % Utilization Against Release |
|---|---|---|---|---|---|---|---|---|---|---|---|---|---|---|---|---|---|---|---|
| | | | | | | No of works | Amount | | No of works | Amount | No of works | Amount | No of works | Amount | | | | | |
| Mandya | belluru | TP | 2019-20 | 12 | 2 | 2 | 12 | 0 | 0 | 0 | 0 | 0 | 0 | 0 | 12 | 12 | 2 | 100 | 100 |
| | | | 2020-21 | 5 | 2 | 2 | 5 | 0 | 0 | 0 | 0 | 0 | 1 | 2.5 | 5 | 2.5 | 1 | 50 | 50 |
| | | | 2021-22 | 2.5 | 0 | 0 | 0 | 0 | 0 | 0 | 0 | 0 | 0 | 0 | 2.5 | 0 | 0 | 0 | 0 |
| | Nagamangala | TMC | 2019-20 | 16 | 1 | 1 | 16 | 0 | 0 | 0 | 0 | 0 | 0 | 0 | 16 | 16 | 1 | 100 | 100 |
| | | | 2020-21 | 5 | 2 | 2 | 5 | 0 | 1 | 2.5 | 0 | 0 | 0 | 0 | 5 | 2.5 | 1 | 50 | 50 |
| | | | 2021-22 | 2.5 | 1 | 1 | 2.5 | 0 | 1 | 2.5 | 0 | 0 | 0 | 0 | 2.5 | 0 | 0 | 0 | 0 |
| | | | Total | 43 | 8 | 8 | 40.5 | 0 | 2 | 5 | 0 | 0 | 1 | 2.5 | 43 | 33 | 5 | 76.74 | 76.74 |